**<u>ಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಸಿ.ಸಿ. 564/2020</u>**

**<u>ಪಿಡಬ್ಲೂ-3</u>**

**<u>ಸಿಡಬ್ಲೂ-3</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಮಣಿಯಮ್ಮ |
| ಗಂಡನ ಹೆಸರು | - | ತಮ್ಮೇಗೌಡ |
| ವಯಸ್ಸು | - | 57 ವರ್ಷ |
| ಕೆಲಸ | - | ಗೃಹಿಣಿ |
| ವಾಸ | - | ಆರಂಬಳ್ಳಿ ಗ್ರಾಮ |

**<u>ದಿನಾಂಕ 17-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ಚಾಸಾ 1 ನನ್ನ ಮಗ. ಮತ್ತು ಚಾಸಾ 2 ನನ್ನ ಗಂಡ. ಈಗ 3 ವರ್ಷ ಹಿಂದೆ ಒಂದು ದಿನ 1.30 ಗಂಟೆ ಸಮಯದಲ್ಲಿ ನಮ್ಮ ಜಮೀನಿನಲ್ಲಿ ಆರೋಪಿತರು ಜಮೀನು ಅವರದ್ದು ಎಂದು ಮತ್ತು ನಾವುಗಳು ಸದರಿ ಜಮೀನು ನಮ್ಮದು ಎಂದು ಜಗಳವಾಗಿ 2 ನೇ ಆರೋಪಿ ಗೋದುಮಟ್ಟೆಯಿಂದ ಚಾಸಾ 2 ರವರ ಭುಜಕ್ಕೆ ಹೊಡೆದಿರುತ್ತಾರೆ. 3 ನೇ ಆರೋಪಿ ದನದ ಹಗ್ಗಗಳನ್ನು ಕೊಯ್ದಿ ಹಾಕಿರುತ್ತಾರೆ. ನಂತರ ಚಾಸಾ 2 ರವರನ್ನು ಕರೆದುಕೊಂಡು ಮನೆಗೆ ಬಂದು ಅಲ್ಲಿಂದ ಕೆ ಆರ್ ನಗರಕ್ಕೆ ಆಸ್ಪತ್ರೆಗೆ ಸೇರಿಸಲು ಬಂದಿರುತ್ತೇವೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಸ್ಥಳ ಮಹಜರ ಅದನ್ನು ನಿಪಿ 2 ಎಂದು ಹಾಗೂ ಅದೇ ರೀತೀ ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ

ನಾನು ಮನೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ನಿಪಿ 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 2 ಕ್ಕೆ ಮಾಹಿತಿಯನ್ನು ಯಾರು ನೀಡಿರುತ್ತಾರೋ ನನಗೆ ಗೋತ್ತಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು ಮಾಗಳನ್ನು ನೋಡಿ ತಮ್ಮ ಹೊಲದಲ್ಲಿ ಅದನ್ನು ನೋಡಿರುವುದಾಗಿ ಗುರುತಿಸಿರುತ್ತಾರೆ. ನಿಪಿ 2 ರ ದಿನಾಂಕ, ಸಮಯ ಮತ್ತು ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದ**

ದಿಃ 01-09-2019 ರಂದು ಮರ ಕಡಿಯುವ ವಿಚಾರವಾಗಿ ಜಮೀನಿನ ಬಳಿ ನಮ್ಮ ಹಾಗೂ ಆರೋಪಿತರ ಮಧ್ಯ ಜಗಳ ಆಗಿರುತ್ತದೆ ಎಂದರೆ ಸರಿ. ಆರೋಪಿತರು ನಮಗೆ ಸೇರಿರುವ ಮರವನ್ನು ಕಡೆದಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ ಚಾಸಾ 2 ರವರು ಅರೋಪಿತರನ್ನು ಕುರಿತು ಏಕೆ ನಮಗೆ ಸೇರಿದ ಮರಗಳನ್ನು ಕಡೆದಿದ್ದಿರಾ ಎಂದು ಕೇಳಿದ್ದಕ್ಕೆ 1 ನೆ ಆರೋಪಿಯ ಚಾಸಾ 2 ರವರನ್ನು ಕುರಿತು ಬೊಳಿಮಗನೆ ಸೂಳೆಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ನಂತರ 1 ನೇ ಆರೋಪಿ 2 ನೇ ಆರೋಪಿಯನ್ನು ಕರೆದುಕೊಂಡು ಬಂದು ಚಾಸಾ 2 ರವರನ್ನು ಹೊಡೆಯುವಂತೆ ತಿಳಿಸಿರುತ್ತಾರೆ ಎಂದರೆ ಸರಿ. ನಂತರ 1 ನೇ ಆರೋಪಿ ಚಾಸಾ 2 ರವರ ಕತ್ತಿನ ಪಟ್ಟಿಯನ್ನು ಹಿಡಿದುಕೊಂಡು ಎಳೆದಾಡಿ ಕೈಯಿಂದ ಚಾಸಾ 2 ರವರ ಮೈಕೈಗೆ ಗುದ್ದಿದನು ಎಂದರೆ ಸರಿ.

ಆರೋಪಿ 3 ಭಾರತಿ ಚಾಸಾ 2 ರವರನ್ನು ಕೊಲೆ ಮಾಡಿ ಎಂದು ಹೇಳಿ ಕೈಯಿಂದ ಚಾಸಾ 2 ರವರ ತಲೆಯನ್ನು ಹಿಡಿದು ಗುಂಜಾಡಿರುತ್ತಾರೆ ಎಂದರೆ ಸರಿ. ಜಗಳ ಬಿಡಿಸಲು ಹೋದಾಗ ನನಗೂ ಸಹ ಹೊಡೆಯಲು ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೊಡಲಿನಲ್ಲಿ ಕುಕ್ಕಿ ಬಿಡಿ ಎಂದು ತಿಳಿಸಿರುತ್ತಾರೆ. ನಂತರ ಚಾಸಾ 4 ರಿಂದ 6 ರವರ ಜಗಳ ಬಿಡಿಸಿರುತ್ತಾರ
ಎಂದರೆ ಸರಿ.

ದಿಃ 03-09-2019 ರಂದು ಪೋಲೀಸರು ಘಟನಾ ಸ್ಥಳದಲ್ಲಿ ಹಾಜರಿದ್ದು ಪೋಲೀಸರು ನಾನು ತೋರಿಸಿಕೊಟ್ಟ ಘಟನಾ ಸ್ಥಳವನ್ನು 4.00 ರಿಂದ 5.00 ಗಂಟೆಯವರೆಗ ವಿವರವಾಗಿ ಮಹಜರ ಮಾಡಿ , ಕೃತ್ಯಕ್ಕೆ ಬಳಸಿದ ಎಮ್ ಒ 1 ನ್ನು ಅಮಾನತು ಪಡಿಸಿಕೊಂಡು ಅದೇಸ್ಥಳದಲ್ಲಿ ನನ್ನ ಹಾಗೂ ಚಾಸಾ 5 ಮತ್ತು 7 ರವರ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು ಶ್ರೀ ಟಿ ಜಿ ಆರೋಪಿ ಪರ ವಕೀಲರು</u>**

ನನಗೆ ಪಾಟೀ ಸವಾಲಿನಲ್ಲಿ ತಿಳಿಸಿರುವ ವಿಚಾರಗಳು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದಲ್ಲಿ ತಿಳಿಸಿದಾಗ ನನ್ನ ಗಮನಕ್ಕೆ ಬಂದಿರುತ್ತವೆ ಎಂದರೆ ಸರಿ. ನಾನು ಆರೊಪಿತರ ವಿರುದ್ದ ಇದೆ ನ್ಯಾಯಾಲಯದಲ್ಲಿ ಒ ಎಸ್ ಸಂಖ್ಯೆ 96/2021 ನ್ನು ಸಿವಿಲ್ ದಾವೆಯನ್ನು ಜಮೀನನ್ನು ಸ್ವಾಧೀನವನ್ನು ಕೊಡಿಸುವಂತೆ ದಾಖಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆ ಈಗಲೂ ಸಹ ಅಂತಿಮ ತೀರ್ಪು ಪ್ರಕಟ ವಾಗದೆ ವಿಚಾರಣೆಯಲ್ಲಿದೆ ಎಂದರೆ ಸರಿ. ನ್ಯಾಯಲಾಯದಲ್ಲಿ ಪ್ರಕರಣ ಬಾಕಿ ಇದ್ದರೂ ಸಹ ಆರೋಪಿತರು ಸ್ವಾಧೀನದಲ್ಲಿರುವ ನಮ್ಮ ದನಕರುಗಳನ್ನು ಕಟ್ಟಿ ಹಾಕಿ ಅವರ ಬೆಳೆಗಳನ್ನು ನಾಶ ಪಡಿಸುತ್ತಿದ್ದೇವೆ ಎಂದರೆ ಸಾಕ್ಷಿ ಈಗ ಯಾವುದೇ ದನಕರುಗಳನ್ನು ಕಟ್ಟುತ್ತಿಲ್ಲ ಎಂದು ತಿಳಿಸಿರುತ್ತಾರೆ.

ಚಾಸಾ 4 ಮತ್ತು 5 ರವರು ಅವರೇ ಸ್ಥಳಕ್ಕೆ ಬಂದಿರುತ್ತಾರೆ. ನಮ್ಮ, ಚಾಸಾ 4 ಮತ್ತು 5 ರವರ ಜಮೀನುಗಳು ಬೇರೆ ಬೇರೆ ಎಂದರೆ ಸರಿ. ಎಮ್ ಒ 1 ನ್ನು ನಿರ್ದಿಷ್ಟವಾಗಿ ಗುರುತು ಮಾಡಲು ಯಾವುದೇ ಸಹಿಯನ್ನು ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಮಟ್ಟೆಯನ್ನು ಮನೆಯಲ್ಲಿ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ ನಂತರ ಹೊಲದ ಹತ್ತಿರ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಆರೋಪಿತರು ಯಾವುದೇ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡದೇ ಇದ್ದರೂ ಸಹ ಜಮೀನಿನ ವಿಚಾರವಾಗಿರುವ ವ್ಯಾಜ್ಯದಿಂದ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆಸರಿಯಲ್ಲ.

ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೊಲದ ಬಳಿ ಮಾಡಿರುವುದಾಗಿ ತಿಳಿಸಿರುತ್ತಾರೆ. ನನಗೆ ಯಾವ ದಿನಾಂಕದಲ್ಲಿ ಪಂಚನಾಮೆ ಮಾಡಿರುತ್ತಾರೋ, ಯಾರು ಬರೆದಿರುತ್ತಾರೋ ಅದೇರೀತಿ ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೋ ನನಗೆ ಗೊತ್ತಿರುವುದಿಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**ಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 564/2020**

**ಪಿಡಬ್ಲೂ-2**

**ಸಿಡಬ್ಲೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ರಘು |
| ತಂದೆಯ ಹೆಸರು | - | ತಮ್ಮೇಗೌಡ |
| ವಯಸ್ಸು | - | 40 ವರ್ಷ |
| ಕೆಲಸ | - | ಖಾಸಗೀ ಕೆಲಸ |
| ವಾಸ | - | ಆರಂಬಳ್ಳಿ ಗ್ರಾಮ |

**ದಿನಾಂಕ 17-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ 2 ಮತ್ತು 3 ನನ್ನ ತಂದೆ ತಾಯಿ. ದಿಃ 01-09-2019 ರಂದು ಆರಂಬಳ್ಳಿ ಗ್ರಾಮದಲ್ಲಿ ಮದ್ಯಾಹ್ನ 1.30 ಗಂಟೆ ಸಮಯದಲ್ಲಿ ಮರ ಕಡಿಯುವ ವಿಚಾರವಾಗಿ ಚಾಸಾ 2 ನಮ್ಮ ತಂದೆ 1 ನೇ ಆರೋಪಿ ರಾಜೇಗೌಡರನ್ನು ಕುರಿತು ನಮ್ಮ ಜಮೀನಿನಲ್ಲಿರುವ ಮರವನ್ನು ಏಕೆ ಕಡೆದಿರುತ್ತಿರಾ ಎಂದು ಕೆಳಿದ್ದಕ್ಕೆ ಆರೋಪಿ 1 ಇದು ನನ್ನ ಜಮೀನು ಎಂದು ಚಾಸಾ 2 ಯಾರು ಕೇಳಲು ಎಂದು ಕೆಟ್ಟದಾಗಿ ಏನು ಕಿತ್ತುಕೊಳ್ಳುತ್ತಿಯಾ ಎಂದು ಬೈದಿರುತ್ತಾನೆ. ನಂತರ ನಿನಗೆ ಏನು ಮಾಡುತ್ತೇನೆ ನೋಡು ಎಂದು ಆರೋಪಿ 2 ರವರನ್ನು ಕರೆದು 1 ನೇ ಆರೋಪಿ ಚಾಸಾ 2 ರವರ ಕತ್ತಿನ ಪಟ್ಟಿಯನ್ನು ಹಿಡಿದುಕೊಂಡು ಮೈಕೈಗೆ ಹೋಡೆದಿರುತ್ತಾನೆ.

ಅದೇ ರೀತಿ ಆರೋಪಿ 2 ಲಕ್ಷ್ಮಣ ಚಾಸಾ 2 ರವರ ಬೆನ್ನಿಗೆ, ತೊಡೆಗೆ ಗೊದುಮಟ್ಟೆಯಿಂದ ಹೊಡೆದಿರುತ್ತಾರೆ. ಅದೇ ರೀತಿ 3 ನೇ ಆರೋಪಿ ಭಾರತಿ ಚಾಸಾ 2 ರವರನ್ನು ಕೊಲೆಮಾಡು ಎಂದು ಚಾಸಾ 2 ರವರ ತಲೆಯನ್ನು ಹಿಡಿದು ಗುಂಜಾಡಿರುತ್ತಾರೆ. ನಂತರ ನಮ್ಮ ತಾಯಿ ಚಾಸಾ 3

ಕೂಗಾಡಿಕೊಂಡು ಪಕ್ಕದಲ್ಲಿದ್ದ ಚಾಸಾ 4 ರಿಂದ 6 ರವರೊಂದಿಗೆ ಜಗಳವನ್ನು ಬಿಸಿಡಿರುತ್ತಾರೆ. ನಂತರ ಗೋದುಮಟ್ಟೆಯನ್ನು ಬಿಸಾಕಿ ಹೋಗಿರುತ್ತಾನೆ. ನಂತರ ಚಾಸಾ 3 ಮತ್ತು 5 ರವರು ನಮ್ಮ ತಂದೆಯವರನ್ನು ಕೆ ಆರ್ ನಗರದ ಸರ್ಕಾರಿಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಸದರಿ ವಿಚಾರವನ್ನು ನನಗೇ ನಮ್ಮ ತಾಯಿದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಆ ಸಮಯದಲ್ಲಿ ನಾನು ಮೈಸೂರಿನಲ್ಲಿದ್ದು ಕೆ ಆರ್ ನಗರದ ಆಸ್ಪತ್ರೆಗೆ ಬಂದು ನಮ್ಮ ತಂದೆಯವರನ್ನು ಕರೆದುಕೊಂಡು ಹೋಗಿ ಆಸ್ಪತ್ರೆಗೆ ದಾಖಲಿಸಿರುತ್ತೇನೆ.

ಮಾರನೇಯ ದಿನ ಸಾಲೀಗ್ರಾಮ ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರನ್ನು ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು ಶ್ರೀ ಟಿ.ಜಿ ಆರೋಪಿ ಪರ ವಕೀಲರಿಂದ ಃ</u>**

ನನಗೆ ಘಟನೆಯ ಬಗ್ಗೆ ಯಾವುದೇ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ನಾನು ಮೈಸೂರಿನ ಕೈಗಾರಿಕಾ ಘಟಕದಲ್ಲಿ ಪ್ಲಾನ್ಸ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಕೆಲಸದ ಅವಧಿ ಬೆಳಿಗ್ಗೆ 7.00 ಗಂಟೆಯಿಂದ ಮದ್ಯಾಹ್ನ 3.00 ಗಂಟೆಯವರೆಗೆ ಅದೇರೀತಿ 3.00 ಗಂಟೆಯಿಂದ ರಾತ್ರಿ 11.00 ಗಂಟೆಯವರೆಗೆ ಇರುತ್ತದೆ. ಸದರಿ ಘಟನೆಯ ದಿನ ಭಾನುವಾರವಾದ್ದರಿಂದ ನಾನು ಮನೆಯಲ್ಲಿಯೇ ಇದ್ದೇನು.

ಚಾಸಾ 3 ರವರು ಆರೊಪಿತರ ವಿರುದ್ದ ಇದೆ ನ್ಯಾಯಾಲಯದಲ್ಲಿ ಒ ಎಸ್ ಸಂಖ್ಯೆ 96/2021 ನ್ನು ಸಿವಿಲ್ ದಾವೆಯನ್ನು ದಾಖಲಿಸಿರುತ್ತಾರೆ ಎಂದರೇ ಸರಿ. ನನಗೆ ನಮ್ಮ ಜಮೀನಿನ ಆರ್ ಟಿ ಸಿಯನ್ನು ಪಿೊಲೀಸ್ ನವರಿಗೂ ನೀಡಿರುತ್ತಾರೋ ಇಲ್ಲಮೋ ನನಗೆ ಮಾಹಿತಿ ಇರುವುದಿಲ್ಲ. ಆರ್ ಟಿ ಸಿಯಲ್ಲಿ ಮರಗಳು ಇರುವ ಕುರಿತು ನಮೂದಾಗಿರುತ್ತದೆಯೋ ಇಲ್ಲಮೋ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನಾವು ಆರೋಪಿತರ ವಿರುದ್ಧ ಅವರು ನಮ್ಮ ಮರಗಳನ್ನು ಕಡೆದಿರುತ್ತಾರೆ ಎಂದು ಯಾವುದೇ ದೂಾರನ್ನು ನೀಡಿರುವುದಿಲ್ಲ.

ಚಾಸಾ 5 ನಮ್ಮ ತಂದೆಯ ಭಾವಮೈದುನ  ಮತ್ತು ನನಗೆ  ಮಾವನಾಗಬೇಕು. ಅದೇ ರೀತೀ ಚಾಸಾ 4 ಶಿವಕುಮಾರ  ನನಗೆಚಿಕ್ಕಪ್ಪನಾಗಬೇಕು. ಅದೇ ರೀತಿ ಚಾಸಾ 6 ನಮ್ಮ ತಾಯಿಯ ಅಣ್ಣ ಮತ್ತು ನನಗೆ ಮಾವ. ನಮ್ಮ ಜಮೀನಿನ ಅಕ್ಕಪಕ್ಕದಲ್ಲಿ ಇತರರ ಜಮೀನುಗಳು ಸಹ ಇವೆ. ನನಗೆ ನಾನು ಚಾಸಾ 2 ರವರನ್ನು ಮೈಸೂರಿನಿಂದ ಬಂದು ಚಿಕಿತ್ಸೆ ಕೊಡಿಸಿದ್ದಾಗಿ ದೂರಿನಲ್ಲಿ ತಿಳಿಸಲು ತೊಂದರೆ ಇರಲಿಲ್ಲ. ನಿಪಿ 1 ದೂರನ್ನು ಪೊಲೀಸ್ ಠಾಣೆಯಲ್ಲಿ  ಟೈಪ್ ಮಾಡಿಸಿರುತ್ತೇನೆ. ಟೈಪ್ ಮಾಡಿದ ನಂತರ ಪೊಲೀಸ್ ನವರ  ಸಹಿ ಮಾಡುವಂತೆ ತಿಳಿಸಿದ್ದು ನಾನು ಸಹಿ ಮಾಡಿರುತ್ತೇನೆ.ೃ

ನನಗೆ ಘಟನೆಯ ಕುರಿತು ಯಾವುದೇ ಖುದು ಮಾಹಿತಿ  ಇರದೇ ಇದ್ದರೂ ಸಹ ಆರೋಪಿತರ ವಿರುದ್ದ ಸಿವಿಲ್ ವ್ಯಾಜ್ಯಯ ದ್ವೇಷದಿಂದ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.  ದೂರಿನಲ್ಲಿ ತಿಳಿವಿಸಿರುವಂತೆ ಯಾವುದೇ  ಘಟನೆ ನಡೆಯದೆ ಇದ್ದರೂ ಸಹ ನಮ್ಮ ಸಂಬಂಧಿಕರನ್ನುಬಳಸಿಕೊಂಡು ಸುಳ್ಳುದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**<u>ಹ</u>**